3

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಹೈಕೋರ್ಟ್ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 1/7/2020

# ಹೈಕೋರ್ಟ್ ಕಲಾಪ ರದ್ದು

**ಬೆಂಗಳೂರು:** ನಗರದಲ್ಲಿ ಕರೊನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಕೀಲರು ಹಾಗೂ ಕೋರ್ಟ್ ಸಿಬ್ಬಂದಿ ಸುರಕ್ಷತೆ ದೃಷ್ಟಿಯಿಂದ ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠದಲ್ಲಿ ಮುಕ್ತ ನ್ಯಾಯಾಲಯದ ಕಲಾಪಗಳನ್ನು (ಫಿಸಿಕಲ್ ಹಿಯರಿಂಗ್) ರದ್ದುಪಡಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ನಿರ್ದೇಶನದ ಮೇರೆಗೆ ರಿಜಿಸ್ಟ್ರಾರ್ ಜನರಲ್ ಮಂಗಳವಾರ ನೋಟಿಸ್ ಪ್ರಕಟಿಸಿದ್ದಾರೆ.



ಮುಂದಿನ ಆದೇಶದವರೆಗೆ ಫಿಸಿಕಲ್ ಹಿಯರಿಂಗ್ ರದ್ದುಪಡಿಸಲಾಗಿದೆ. ತುರ್ತು ಪ್ರಕರಣಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಲಾಗುವುದು. ಧಾರವಾಡ ಹಾಗೂ ಕಲಬುರಗಿ ಪೀಠಗಳು ಈ ಹಿಂದೆ ಪ್ರಕಟಿಸಿರುವ ಎಸ್‌ಒಪಿ ಅನುಸಾರವೇ ಕಾರ್ಯನಿರ್ವಹಿಸಲಿವೆ. ಕೋವಿಡ್-19 ಸಂಬಂಧಿಸಿದ ಪಿಐಎಲ್‌ಗಳನ್ನು ಸಿಜೆ ಎ.ಎಸ್. ಓಕ್ ಹಾಗೂ ನ್ಯಾ. ಅರವಿಂದಕುಮಾರ್ ಅವರ ಪೀಠ ವಿಚಾರಣೆ ನಡೆಸಲಿದೆ.

**ಹೈಕೋರ್ಟ್‌ಗೆ ಸ್ಯಾನಿಟೈಸೇಷನ್:** ಮುಂಜಾಗ್ರತಾ ಕ್ರಮವಾಗಿ ಹೈಕೋರ್ಟ್ ಸಂಕೀರ್ಣವನ್ನು ಮಂಗಳವಾರ ಸ್ಯಾನಿಟೈಸ್ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಮಂಗಳವಾರದ ಕಲಾಪಗಳನ್ನು ರದ್ದುಪಡಿಸಿ, ಎಲ್ಲ ಸಿಬ್ಬಂದಿಗೆ ರಜೆ ಘೋಷಿಸಲಾಗಿತ್ತು. ಮಂಗಳವಾರ ನಿಗದಿಯಾಗಿದ್ದ ತುರ್ತು ಪ್ರಕರಣಗಳನ್ನು ಬುಧವಾರ ಹಾಗೂ ಬುಧವಾರ ನಿಗದಿಯಾಗಿದ್ದ ಪ್ರಕರಣಗಳನ್ನು ಗುರುವಾರ ಹಾಗೂ ಶುಕ್ರವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಲಾಗುತ್ತದೆ.